ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 17-03-2003

# *ಈ ವರ್ಷ ಸ್ವಮಾನದಲ್ಲಿ ಇರಬೇಕು, ಸಮ್ಮಾನವನ್ನು ಕೊಡಬೇಕು, ಸರ್ವರ ಸಹಯೋಗಿ ಆಗಬೇಕು ಹಾಗೂ ಸಮರ್ಥರನ್ನಾಗಿ ತಯಾರು ಮಾಡಬೇಕು.*

(इस वर्ष - स्वमान में रहना, सम्मान देना, सबका सहयोगी बनना और समर्थ बनाना)

ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ  ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಭಾಗ್ಯವಿಧಾತ ಬಾಪ್‌ದಾದಾರವರು ಎಲ್ಲಾ ಕಡೆಯ ಪ್ರತಿಯೊಂದು ಮಗುವಿನ ಮಸ್ತಕದಲ್ಲಿ ಭಾಗ್ಯದ ಮೂರು ರೇಖೆಗಳನ್ನು ನೋಡುತ್ತಿದ್ದಾರೆ. ಒಂದು ಪರಮಾತ್ಮನ  ಪಾಲನೆಯ ಭಾಗ್ಯವಂತ ರೇಖೆ, ಎರಡನೆಯದು ಸತ್ಯ ಶಿಕ್ಷಕನ ಶ್ರೇಷ್ಠ ಶಿಕ್ಷಣದ ಭಾಗ್ಯವಂತ ರೇಖೆ, ಮೂರನೆಯದು ಶ್ರೀಮತದ ಹೊಳೆಯುತ್ತಿರುವ ರೇಖೆ, ಎಲ್ಲಾ ಕಡೆಯ ಮಕ್ಕಳ ಮಸ್ತಕದ ಮಧ್ಯದಲ್ಲಿ ಮೂರು ರೇಖೆಗಳು ಬಹಳ ಚೆನ್ನಾಗಿ ಹೊಳೆಯುತ್ತಿವೆ. ತಾವು ಎಲ್ಲರೂ ಸಹ ತಮ್ಮ ಮೂರೂ ಭಾಗ್ಯದ ರೇಖೆಗಳನ್ನು ನೋಡುತ್ತಿದ್ದೀರಲ್ಲವೇ? ಭಾಗ್ಯವಿಧಾತ ತಾವು ಮಕ್ಕಳ ತಂದೆಯಾಗಿದ್ದಾರೆ ಅಂದಮೇಲೆ ತಮಗಲ್ಲದೇ ಶ್ರೇಷ್ಠ ಭಾಗ್ಯ ಬೇರೆ ಯಾರದಾಗಲು ಸಾಧ್ಯ! ಬಾಪ್‌ದಾದಾ ನೋಡುತ್ತಿದ್ದಾರೆ - ವಿಶ್ವದ ಅನೇಕ ಕೋಟಿ ಆತ್ಮರು ಇದ್ದಾರೆ ಆದರೆ ಆ ಕೋಟಿಯಲ್ಲಿ 6 ಲಕ್ಷ ಪರಿವಾರ,  ಎಷ್ಟು ಕಡಿಮೆ ಇದ್ದೀರಿ! ಕೋಟಿಯಲ್ಲಿ ಕೆಲವರಾಗಿದ್ದೀರಲ್ಲವೇ! ಹೇಗೆ ಪ್ರತಿಯೊಬ್ಬ ಮಾನವನ ಜೀವನದಲ್ಲಿ ಈ 3 ಮಾತುಗಳು ಪಾಲನೆ, ವಿದ್ಯೆ ಹಾಗೂ ಶ್ರೇಷ್ಠ ಮತ. ಮೂರರ

ಅವಶ್ಯಕತೆ ಇದೆ. ಆದರೆ ಈ ಪರಮಾತ್ಮನ ಪಾಲನೆ ಹಾಗೂ ದೇವಾತ್ಮರ ಹಾಗೂ ಮಾನವಾತ್ಮರ ಪಾಲನೆಯ ವಿದ್ಯೆಯಲ್ಲಿ ಹಗಲು ರಾತ್ರಿಯ ವ್ಯತ್ಯಾಸವಿದೆ. ಅಂದಮೇಲೆ ಇಷ್ಟೊಂದು ಶ್ರೇಷ್ಠ ಭಾಗ್ಯ, ಯಾವುದು ಸಂಕಲ್ಪದಲ್ಲಿಯೂ ಇರಲಿಲ್ಲ ಆದರೆ ಈಗ ಪ್ರತಿಯೊಬ್ಬರ ಮನಸ್ಸು ಹಾಡುತ್ತಿದೆ - ಪಡೆದಾಯಿತು. ಪಡೆದಾಯಿತೋ ಅಥವಾ ಪಡೆಯಬೇಕೋ? ಏನು ಹೇಳುತ್ತೀರಿ? ಪಡೆದಾಯಿತಲ್ಲವೇ, ತಂದೆಯೂ ಸಹ ಇಂತಹ ಮಕ್ಕಳ ಭಾಗ್ಯವನ್ನು ನೋಡಿ ಹರ್ಷಿತರಾಗುತ್ತಾರೆ. ಮಕ್ಕಳು ಹೇಳುತ್ತಾರೆ ವಾಹ್! ಬಾಬಾ ವಾಹ್! ಹಾಗೂ ತಂದೆಯು ಹೇಳುತ್ತಾರೆ ವಾಹ್! ಮಕ್ಕಳೇ ವಾಹ್! ಸಾಕು, ಈ ಭಾಗ್ಯವನ್ನು ಸದಾ ಸ್ಮೃತಿಯಲ್ಲಿ ಇಟ್ಟುಕೊಳ್ಳುವುದು ಮಾತ್ರವಲ್ಲ ಆದರೆ ಸದಾ ಸ್ಮೃತಿಸ್ವರೂಪರಾಗಬೇಕು. ಕೆಲವು ಮಕ್ಕಳು ಬಹಳ ಚೆನ್ನಾಗಿ ಯೋಚಿಸುತ್ತಾರೆ ಆದರೆ ಯೋಚನಾ ಸ್ವರೂಪರಾಗಬಾರದು. ಸ್ಮೃತಿ ಸ್ವರೂಪರಾಗಬೇಕು. ಸ್ಮೃತಿ ಸ್ವರೂಪರೇ ಸಮರ್ಥ ಸ್ವರೂಪರು. ಯೋಚನಾ ಸ್ವರೂಪರು ಸಮರ್ಥ ಸ್ವರೂಪರಲ್ಲ.

ಬಾಪ್‌ದಾದಾ ಮಕ್ಕಳ ಭಿನ್ನ ಭಿನ್ನ ಲೀಲೆಯನ್ನು ನೋಡುತ್ತಾ ಮುಗುಳ್ನಗುತ್ತಿರುತ್ತಾರೆ. **ಕೆಲವರು ಯೋಚನಾ ಸ್ವರೂಪರಾಗುತ್ತಾರೆ. ಸದಾ ಸ್ಮೃತಿ ಸ್ವರೂಪರಾಗಿರುವುದಿಲ್ಲ. ಕೆಲವೊಮ್ಮೆ ಯೋಚನಾ ಸ್ವರೂಪರು. ಕೆಲವೊಮ್ಮೆ - ಸ್ಮೃತಿಸ್ವರೂಪರು. ಯಾರು ಸ್ಮೃತಿ ಸ್ವರೂಪದಲ್ಲಿ ಇರುತ್ತಾರೆಯೋ ಅವರು ನಿರಂತರ ಸಹಜಸ್ವರೂಪರಾಗಿರುತ್ತಾರೆ. ಯಾರು ಯೋಚನಾ ಸ್ವರೂಪರಾಗಿರುತ್ತಾರೆಯೋ ಅವರು ಶ್ರಮ ಪಡಬೇಕಾಗುತ್ತದೆ. ಈ ಸಂಗಮಯುಗ ಶ್ರಮ ಪಡುವ ಯುಗವಲ್ಲ, ಸರ್ವ ಪ್ರಾಪ್ತಿಗಳ ಅನುಭವದ ಯುಗವಾಗಿದೆ. 63 ಜನ್ಮ ಶ್ರಮ ಪಟ್ಟಿದ್ದೀರಿ ಆದರೆ ಈ ಶ್ರಮದ ಫಲ ಪ್ರಾಪ್ತಿ ಮಾಡಿಕೊಳ್ಳುವ ಯುಗ ಅರ್ಥಾತ್ ಸಮಯವಾಗಿದೆ.** ಬಾಪ್‌ದಾದಾ ನೋಡುತ್ತಿದ್ದರು ದೇಹಬಾನದ ಸ್ಮೃತಿಯಲ್ಲಿ ಇರಲು ಏನಾದರೂ ಕಷ್ಟಪಟ್ಟಿದ್ದೀರಾ? ನಾನು ಇಂತಹವನಾಗಿದ್ದೇನೆ. ನಾನು ಇಂತಹವನಾಗಿದ್ದೇನೆ ಎಂಬ ಶ್ರಮ ಪಟ್ಟಿದ್ದೀರಾ? ಸ್ವಾಭಾವಿಕವಾಗಿತ್ತಲ್ಲವೇ. ದೇಹಬಾನವು ಸ್ವಭಾವವಾಯಿತಲ್ಲವೇ. ಅಷ್ಟು ಪರಿಪಕ್ವ ಸ್ವಭಾವ ಆಗಿಬಿಟ್ಟಿದೆ ಅದು ಈಗಲೂ ಸಹ ಕೆಲವೊಮ್ಮೆ ಕೆಲವು ಮಕ್ಕಳಿಗೆ ಆತ್ಮಾಭಿಮಾನಿಗಳಾಗುವ ಸಮಯದಲ್ಲಿ ದೇಹಾಭಿಮಾನ ತನ್ನ ಕಡೆ ಆಕರ್ಷಣೆ ಮಾಡುತ್ತದೆ. ನಾನು ಆತ್ಮನಾಗಿದ್ದೇನೆ. ನಾನು ಆತ್ಮನಾಗಿದ್ದೇನೆ ಎಂದು ಯೋಚಿಸುತ್ತಾರೆ ಆದರೆ ದೇಹಬಾನ ಆ ರೀತಿ ಸ್ವಾಭಾವಿಕವಾಗಿಬಿಟ್ಟಿದೆ. ಪದೇ-ಪದೇ ಇಷ್ಟವಿಲ್ಲದಿದ್ದರೂ, ಯೋಚಿಸದಿದ್ದರೂ ದೇಹಬಾನದಲ್ಲಿ ಬಂದುಬಿಡುತ್ತಾರೆ. ಬಾಪ್‌ದಾದಾ ಹೇಳುತ್ತಾರೆ ಈಗ ಮರುಜೀವ ಜನ್ಮದಲ್ಲಿ ಆತ್ಮಾಭಿಮಾನಿ ಅರ್ಥಾತ್ ದೇಹೀ- ಅಭಿಮಾನಿ ಸ್ಥಿತಿ ಅದೇ ರೀತಿ ಸ್ವಭಾವ ಹಾಗೂ ಸ್ವಾಭಾವಿಕವಾಗಲಿ. ನಾನು ಆತ್ಮ. ನಾನು ಆತ್ಮ ಈ ರೀತಿ ಶ್ರಮ ಪಡಬಾರದು. ಯಾವಾಗ ಬ್ರಾಹ್ಮಣ ಜನ್ಮವನ್ನು ಪಡೆದವೋ. ಯಾವುದೇ ಮಗುವಿನ ಜನ್ಮವಾದರೆ ಸ್ವಲ್ಪ ಅರ್ಥವಾದರೂ ಅವರಿಗೆ ಪರಿಚಯ ಕೊಡುತ್ತೀರಿ - ತಾವು ಯಾರು, ಯಾರವರಾಗಿದ್ದೀರಿ. ತಾವು ಬ್ರಾಹ್ಮಣ ಮಕ್ಕಳಿಗೆ ಜನ್ಮತಹ ಏನು ಪರಿಚಯ ಸಿಕ್ಕಿತು? ತಾವು ಯಾರು? ಆತ್ಮದ ಪಾಠ ಪಕ್ಕಾ ಮಾಡಿಸಿದರಲ್ಲವೇ ಅಂದಮೇಲೆ ಈ ಮೊದಲ ಪರಿಚಯ ಸ್ವಾಭಾವಿಕವಾಗಿ ಸ್ವಭಾವವಾಗಬೇಕು. ಸ್ವಭಾವ ಸ್ವಾಭಾವಿಕ ಹಾಗೂ ನಿರಂತರವಾಗಿ ಇರುತ್ತದೆ. ಕೆಲವು ಮಕ್ಕಳದು ಇದೆ. ಯೋಚಿಸಬೇಕಾಗಿಲ್ಲ ಸ್ಮೃತಿ ಸ್ವರೂಪರಾಗಿದ್ದಾರೆ. ಈಗ ನಿರಂತರ ಹಾಗೂ ಸ್ವಾಭಾವಿಕವಾಗಿ ಸ್ಮೃತಿಸ್ವರೂಪರಾಗಲೇಬೇಕು. ಕೊನೆಯ ಅಂತಿಮ ಪೇಪರ್ ಎಲ್ಲಾ ಬ್ರಾಹ್ಮಣರದು ಇದೇ ಆಗಿದೆ - ನಷ್ಟೋಮೋಹ - ಸ್ಮೃತಿ ಸ್ವರೂಪ. ಅಂದಮೇಲೆ ಈ ವರ್ಷದಲ್ಲಿ ಏನು ಮಾಡುತ್ತೀರಿ? ಕೆಲವು ಮಕ್ಕಳು ಈ ವರ್ಷದಲ್ಲಿ ಏನು ವಿಶೇಷ ಗುರಿ ಇಟ್ಟುಕೊಳ್ಳಬೇಕು ಎಂದು ಕೇಳುತ್ತಾರೆ? ಅದಕ್ಕೆ ಬಾಪ್‌ದಾದಾ ಹೇಳುತ್ತಾರೆ ಸದಾ ದೇಹಿ-ಅಭಿಮಾನಿ, ಸ್ವತಿಸ್ವರೂಪ ಭವ! ಜೀವನ್ಮುಕ್ತಿಯಂತೂ ಪ್ರಾಪ್ತಿ ಆಗಲೇಬೇಕು

ಆದರೆ ಜೀವನ್ಮುಕ್ತರಾಗುವ ಮೊದಲು ಶ್ರಮದಿಂದ ಮುಕ್ತರಾಗಿ, ಈ ಸ್ಥಿತಿ ಸಮಯವನ್ನು ಸಮೀಪ ತರುತ್ತದೆ ಹಾಗೂ ತಮ್ಮ ವಿಶ್ವದ ಸಹೋದರರ ಸಹೋದರಿಯನ್ನು ದುಃಖ, ಅಶಾಂತಿಯಿಂದ ಮುಕ್ತ ಮಾಡುತ್ತದೆ. ತಮ್ಮ ಈ ಸ್ಥಿತಿ ಆತ್ಮರಿಗಾಗಿ ಮುಕ್ತಿಧಾಮದ ಬಾಗಿಲನ್ನು ತೆರೆಯುತ್ತದೆ. ಅಂದಮೇಲೆ ತಮ್ಮ ಸಹೋದರ-ಸಹೋದರಿಯರ ಮೇಲೆ ದಯೆ ಬರುವುದಿಲ್ಲವೇ? ಎಲ್ಲಾ ಕಡೆಯ ಆತ್ಮರು ಎಷ್ಟೊಂದು ಚೀರಾಡುತ್ತಿದ್ದಾರೆ  ತಮ್ಮ ಮುಕ್ತಿ ಸರ್ವರಿಗೂ ಮುಕ್ತಿಯನ್ನು ಕೊಡಿಸುತ್ತದೆ. ಇದನ್ನು ಪರಿಶೀಲನೆ ಮಾಡಿಕೊಳ್ಳಿ ಎಲ್ಲಿಯತನಕ ಸ್ವಾಭಾವಿಕ ಸ್ಮೃತಿಯಿಂದ ಸಮರ್ಥ ಸ್ವರೂಪರು ಆಗಿದ್ದೀರಿ? ಸಮರ್ಥ ಸ್ವರೂಪರಾಗುವುದೇ ವ್ಯರ್ಥವನ್ನು ಸಹಜವಾಗಿ ಸಮಾಪ್ತಿ ಮಾಡುವುದಾಗಿದೆ ಪದೇ-ಪದೇ ಶ್ರಮ ಪಡಬೇಕಾಗಿಲ್ಲ.

ಈಗ ಈ ವರ್ಷ ಬಾಪ್‌ದಾದಾ ಮಕ್ಕಳ ಸ್ನೇಹದಲ್ಲಿ ಯಾವುದೇ ಮಗುವಿನ ಯಾವುದೇ ಸಮಸ್ಯೆಯಲ್ಲಿ ಶ್ರಮವನ್ನು ನೋಡಲು ಇಷ್ಟಪಡುವುದಿಲ್ಲ. ಸಮಸ್ಯೆಯ ಸಮಾಪ್ತಿಯಾಗಬೇಕು ಹಾಗೂ ಸಮಾಧಾನ, ಸಮರ್ಥ ಸ್ವರೂಪರು. ಇದು ಆಗಲು ಸಾಧ್ಯವೇ? ಆಗುತ್ತದೆಯೇ, ದಾದಿಯರೇ ಹೇಳಿ? ಶಿಕ್ಷಕಿಯರು ಹೇಳಿ ಆಗುತ್ತದೆಯೇ? ಪಾಂಡವರು ಆಗುತ್ತದೆಯೇ? ನಂತರ ನೆಪ ಹೇಳಬಾರದು, ಹೀಗಿತ್ತಲ್ಲವೇ, ಹೀಗಾಯಿತಲ್ಲವೇ! ಇದಿಲ್ಲವೆಂದರೆ ಇದು ಆಗುತ್ತಿರಲಿಲ್ಲ! ಬಾಪ್‌ದಾದಾ ಈ ಆಟಗಳನ್ನು ಬಹಳ ನೋಡಿದ್ದಾರೆ. ಮಧುರ-ಮಧುರವಾದ ಆಟ. ಏನೇ ಆಗಲಿ, ಹಿಮಾಲಯಕ್ಕಿಂತಲೂ ದೊಡ್ಡದಾದ ನೂರರಷ್ಟು ಸಮಸ್ಯೆಯ ಸ್ವರೂಪವಿರಲಿ, ತನುವಿನ ಮೂಲಕ ಇರಬಹುದು, ಮನಸ್ಸಿನ ಮೂಲಕ ಇರಬಹುದು, ವ್ಯಕ್ತಿಯ ಮೂಲಕ. ಪ್ರಕೃತಿಯ ಮೂಲಕ ಸಮಸ್ಯೆ, ಪರ-ಸ್ಥಿತಿ ತಮ್ಮ ಸ್ವ ಸ್ಥಿತಿಯ ಮುಂದೆ ಏನೇನೂ ಅಲ್ಲ ಹಾಗೂ ಸ್ವ ಸ್ಥಿತಿಗೆ ಸಾಧನವಾಗಿದೆ - ಸ್ವಮಾನ. ಸ್ವಾಭಾವಿಕ ರೂಪದಲ್ಲಿ ಸ್ವಮಾನದಲ್ಲಿ ಇರಿ. ನೆನಪು ಮಾಡಬೇಕಾಗಿಲ್ಲ. ಪದೇ-ಪದೇ ಶ್ರಮ ಪಡಬೇಕಾಗಿಲ್ಲ. ನಾನು ಸ್ವದರ್ಶಚಕ್ರಧಾರಿ ಆಗಿದ್ದೇನೆ. ನಾನು ಕಣ್ಮಣಿ ಆಗಿದ್ದೇನೆ, ನಾನು ಸಿಂಹಾಸನಾಧಿಕಾರಿಯಾಗಿದ್ದೇನೆ.... ಆಗಿಯೇ ಇದ್ದೇನೆ. ಬೇರೆ ಯಾರಾದರೂ ಆಗುವವರು ಇದ್ದಾರೇಯೇ! ಕಲ್ಪದ ಮೊದಲು ಯಾರು ಆಗಿದ್ದರು? ಬೇರೆಯವರು ಆಗಿದ್ದರೋ ಅಥವಾ ತಾವುಗಳೇ ಆಗಿದ್ದಿರೋ? ತಾವೇ ಆಗಿದ್ದಿರಿ. ಈಗಲೂ ತಾವುಗಳೇ. ಪ್ರತೀ ಕಲ್ಪದಲ್ಲೂ ತಾವೇ ಆಗುತ್ತೀರಿ. ಇದು ನಿಶ್ಚಿತವಾಗಿದೆ. ಬಾಪ್‌ದಾದಾ ಎಲ್ಲರ ಚೆಹರೆ ನೋಡುತ್ತಿದ್ದಾರೆ - ಇವರು ಅದೇ ಕಲ್ಪದ ಮೊದಲಿನವರು, ಈ ಕಲ್ಪದವರೇ? ಅನೇಕ ಕಲ್ಪದವರೇ? ಅನೇಕ ಕಲ್ಪದವರು ತಾನೇ. ಹೌದಾ? ಯಾರು ಪ್ರತೀ ಕಲ್ಪದವರೋ ಅವರು ಕೈಯನ್ನು ಎತ್ತಿರಿ? ಮತ್ತೆ ನಿಶ್ಚಿತವಾಯಿತಲ್ಲವೇ, ತಮಗೆ ಸರ್ಟಿಫೀಟ್ ಸಿಕ್ಕಿದೆಯೋ ಅಥವಾ ಪಡೆಯಬೇಕೋ? ಸಿಕ್ಕಿದೆಯಲ್ಲವೇ? ಸಿಕ್ಕಿದೆಯೋ ಅಥವಾ ಪಡೆಯಬೇಕೋ? ಕಲ್ಪದ ಮೊದಲು ಸಿಕ್ಕಿದೆ. ಈಗ ಸಿಗುವುದಿಲ್ಲವೇ? ಇದೇ ಸ್ಮೃತಿಸ್ವರೂಪರಾಗಿ. ಸರ್ಟಿಫಿಕೆಟ್ ಸಿಕ್ಕುಬಿಟ್ಟಿದೆ. ಅದು ಗೌರವಾನ್ವಿತ ತೇರ್ಗಡೆಯದಿರಬಹುದು, ತೇರ್ಗಡೆಯದಿರಬಹುದು, ಈ ವ್ಯತ್ಯಾಸವಂತೂ ಆಗುತ್ತದೆ ಆದರೆ ನಾವುಗಳೇ ಆಗಿದ್ದೇವೆ ಎಂದು ಪಕ್ಕಾ ಇದೆ ತಾನೇ! ಅಥವಾ ರೈಲಿನಲ್ಲಿ ಹೋಗುತ್ತಾ ಹೋಗುತ್ತಾ ಮರೆತು ಹೋಗುತ್ತದೆ. ವಿಮಾನದಲ್ಲಿ ಹೋಗುತ್ತಾ ಹಾರಿ ಹೋಗುತ್ತದೆಯೇ? ಇಲ್ಲ.

ಹೇಗೆ ನೋಡಿ ಈ ವರ್ಷ ದೃಢ ಸಂಕಲ್ಪವನ್ನು ಮಾಡಿದ್ದೀರಿ, ಶಿವರಾತ್ರಿಯನ್ನು ಎಲ್ಲಾ ಕಡೆ ಉತ್ಸಾಹ-ಉಲ್ಲಾಸದಿಂದ ಆಚರಿಸಬೇಕು. ಆಚರಿಸಿದ್ದೀರಿ ತಾನೇ! ದೃಢ ಸಂಕಲ್ಪದಿಂದ ಏನು ಯೋಚಿಸಿದಿರೋ ಅದು ಆಯಿತಲ್ಲವೇ!

ಅಂದಮೇಲೆ ಇದು ಯಾವ ಮಾತಿನ ಚಮತ್ಕಾರ ಏಕತೆ ಹಾಗೂ ದೃಢತೆಯ ಚಮತ್ಕಾರವಾಗಿದೆ. 67 ಸ್ಥಾನಗಳಲ್ಲಿ ಪ್ರೋಗ್ರಾಂ ಮಾಡಲು ಯೋಚನೆ ಮಾಡಿದ್ದೀರಿ ಆದರೆ ಬಾಪ್‌ದಾದಾ ನೋಡಿದರು ಕೆಲವು ಮಕ್ಕಳು ಅದಕ್ಕಿಂತಲೂ ಜಾಸ್ತಿ ಪ್ರೋಗ್ರಾಂ ಮಾಡಿದ್ದಾರೆ. ಇದು ಸಮರ್ಥ ಸ್ವರೂಪದ ಚಿಹ್ನೆಯಾಗಿದೆ. ಉತ್ಸಾಹ-ಉಲ್ಲಾಸದ ಪ್ರತ್ಯಕ್ಷ ಪ್ರಮಾಣವಾಗಿದೆ. ಸ್ವತಃ ಎಲ್ಲಾ ಕಡೆ ಮಾಡಿದ್ದೀರಲ್ಲವೇ ಹಾಗೆಯೇ ಎಲ್ಲರೂ ಸೇರಿ ಒಬ್ಬರಿಗೊಬ್ಬರು ಧೈರ್ಯವನ್ನು ಹೆಚ್ಚಿಸಿ. ಈ ಸಂಕಲ್ಪವನ್ನು ಮಾಡಿ-ಈಗ ಸಮಯವನ್ನು ಸಮೀಪ ತರಲೇಬೇಕು. ಆತ್ಮರಿಗೆ ಮುಕ್ತಿಯನ್ನು ಕೊಡಿಸಲೇಬೇಕು ಆದರೆ ಇದು ಯಾವಾಗ ಆಗುತ್ತದೆ ಎಂದರೆ ಯಾವಾಗ ತಮ್ಮ ಯೋಚನೆಯನ್ನು ಸ್ಮೃತಿ ಸ್ವರೂಪದಲ್ಲಿ ತರುತೀರೋ ಆಗ.

ಬಾಪ್‌ದಾದಾ ವಿದೇಶದವರದೂ ಸಹ ವಿಶೇಷ ಸ್ನೇಹ ಮಿಲನ ಹಾಗೂ ಮೀಟಿಂಗ್ ಇದೆ ಹಾಗೂ ಭಾರತದವರದೂ ಸಹ ಮೀಟಿಂಗ್ ಇದೆ ಎಂದು ಕೇಳಿಸಿಕೊಂಡರು. ಆಗ ಮೀಟಿಂಗ್ ನಲ್ಲಿ ಕೇವಲ ಸೇವೆಯ ಯೋಜನೆಯನ್ನು ಮಾಡಬೇಕು ಆದರೆ ಸಮತೋಲನೆ ಇರಬೇಕು. ಆ ರೀತಿ ಒಬ್ಬರಿಗೊಬ್ಬರು ಸಹಯೋಗಿಗಳಾಗಿ, ಆದರಿಂದ ಎಲ್ಲಾ ಮಾಸ್ಟರ್ ಸರ್ವ ಶಕ್ತಿವಂತರಾಗಿ ಮುಂದೆ ಹಾಗುತ್ತಾ, ಹೋಗಬೇಕು. ಮಾತುಗಳನ್ನು ನೋಡಬೇಡಿ. ಸಹಯೋಗಿಗಳಾಗಿ, ಸ್ವಮಾನದಲ್ಲಿರಿ ಹಾಗೂ ಸಮ್ಮಾನವನ್ನು ಕೊಟ್ಟು ಸಹಯೋಗಿಗಳಾಗಿ ಏಕೆಂದರೆ ಯಾವುದೇ ಆತ್ಮಕ್ಕೆ ಒಂದುವೇಳೆ ತಾವು ಮನಸ್ಸಿಂದ ಸನ್ಮಾನವನ್ನು ಕೊಟ್ಟರೆ ಇದು ಬಹಳ, ಬಹಳ ದೊಡ್ಡ ಪುಣ್ಯವಾಗಿದೆ ಏಕೆಂದರೆ ಬಲಹೀನ ಆತ್ಮವನ್ನು ಉತ್ಸಾಹ ಉಲ್ಲಾಸದಲ್ಲಿದಲ್ಲಿ ತಂದರೆ ಎಷ್ಟು ದೊಡ್ಡ ಪುಣ್ಯವಾಗಿದೆ ಬಿದ್ದಿರುವವರನ್ನು ಬೀಳಿಸಬಾರದು. ಆಲಿಂಗನ ಮಾಡಿಕೊಳ್ಳಬೇಕು ಅರ್ಥಾತ್ ಹೊರರೂಪದಿಂದ ಅಲ್ಲ. ಆಲಿಂಗನ ಮಾಡಿಕೊಳ್ಳುವುದು ಅರ್ಥಾತ್ ತಂದೆಯ ಸಮಾನರನ್ನಾಗಿ ಮಾಡುವುದು. ಸಹಯೋಗ ಕೊಡುವುದು. ಅಂದಮೇಲೆ ಈ ವರ್ಷ ಕೇಳಿದಿರಲ್ಲವೇ - ಏನೇನು ಮಾಡಬೇಕು? ಸಮ್ಮಾನ ಕೊಡಬೇಕು ಹಾಗೂ ಸ್ವಮಾನದಲ್ಲಿ ಇರಬೇಕು. ಸಾಕು. ಸಮರ್ಥರಾಗಿ ಸಮರ್ಥರನ್ನಾಗಿ ತಯಾರು ಮಾಡಬೇಕು. ವ್ಯರ್ಥದ ಮಾತುಗಳಲ್ಲಿ ಹೋಗಬಾರದು. ಬಲಹೀನ ಆತ್ಮರು ಮೊದಲೇ ಬಲಹೀನರು, ಅವರ ಬಲಹೀನತೆಯನ್ನು ನೋಡುತ್ತಾ ಇದ್ದರೆ ಹೇಗೆ ಸಹಯೋಗಿಗಳಾಗುತ್ತೀರಿ! ಸಹಯೋಗ ಕೊಟ್ಟರೆ ಆಶೀರ್ವಾದಗಳು ಸಿಗುತ್ತವೆ. ಎಲ್ಲದಕ್ಕಿಂತ ಸಹಜ ಪುರುಷಾರ್ಥವಾಗಿದೆ. ಬೇರೆ ಏನೂ ಮಾಡಲು ಸಾಧ್ಯವಾಗದಿದ್ದರೂ ಎಲ್ಲದಕ್ಕಿಂತ ಸಹಜ ಪುರುಷಾರ್ಥವಾಗಿದೆ - ಆಶೀರ್ವಾದಗಳನ್ನು ಕೂಡಿ ಆಶೀರ್ವಾದಗಳನ್ನು ಪಡೆಯಿರಿ. ಸಮ್ಮಾನವನ್ನು ಕೊಡಿ ಹಾಗೂ ಮಹಿಮೆಗೆ ಯೋಗ್ಯರಾಗಿ, ಸನ್ಮಾನ ಕೊಡುವಂತಹವರೇ ಸರ್ವರ ಮೂಲಕ ಮಾನನೀಯರಾಗುತ್ತಾರೆ ಹಾಗೂ ಎಷ್ಟು ಈಗ ಮಾನನೀಯರಾಗುತ್ತೀರೋ ಅಷ್ಟು ರಾಜ್ಯಾಧಿಕಾರಿ ಹಾಗೂ ಪೂಜ್ಯ ಆತ್ಮರಾಗುತ್ತೀರಿ. ಕೊಡುತ್ತಾ ಹೋಗಿ, ತೆಗೆದುಕೊಳ್ಳುವುದಲ್ಲ. ಪಡೆಯುವುದು ಹಾಗೂ ಕೊಡುವುದು ಇದು ವ್ಯಾಪರಿಗಳ ಕೆಲಸ, ತಾವು ದಾತನ ಮಕ್ಕಳಾಗಿದ್ದೀರಿ. ಬಾಕಿ ಬಾಪ್‌ದಾದಾ ಎಲ್ಲಾ ಕಡೆಯ ಮಕ್ಕಳ ಸೇವೆಯನ್ನು ನೋಡಿ ಖುಷಿ ಆಗುತ್ತಾರೆ. ಎಲ್ಲರೂ ಚೆನ್ನಾಗಿ ಸೇವೆಯನ್ನು ಮಾಡಿದ್ದೀರಿ ಆದರೆ ಈಗ ಮುಂದುವರೆಯಬೇಕಲ್ಲವೇ. ವಾಣಿಯ ಮೂಲಕ ಎಲ್ಲರೂ ಚೆನ್ನಾಗಿ ಸೇವೆ ಮಾಡಿದ್ದೀರಿ. ಸಾಧನಗಳ ಮೂಲಕವೂ ಒಳ್ಳೆಯ ಸೇವೆಯ ಫಲಿತಾಂಶವನ್ನು ತೆಗೆದಿದ್ದೀರಿ. ಅನೇಕ ಅತ್ಮರ ದೂರನ್ನೂ ಸಹ ಸಮಾಪ್ತಿ ಮಾಡಿದ್ದೀರಿ. ಜೊತೆ-ಜೊತೆಗೆ ಸಮಯದ ತೀವ್ರಗತಿಯ ವೇಗವನ್ನು ನೋಡಿ ಬಾಪ್‌ದಾದಾ ಈ ರೀತಿ ಯೋಚಿಸುತ್ತಾರೆ - ಕೇವಲ ಸ್ವಲ್ಪ ಆತ್ಮರ ಸೇವೆಯನ್ನು ಮಾಡಬಾರದು ಆದರೆ ವಿಶ್ವದ ಸರ್ವ ಆತ್ಮರ ಮುಕ್ತಿದಾತ ನಿಮಿತ್ತ ನೀವಾಗಿದ್ದೀರಿ ಆದರೆ ತಂದೆಗೆ ಜೊತೆಗಾರರಾಗಿದ್ದೀರಿ ಅಂದಮೇಲೆ ಸಮಯದ ವೇಗಕ್ಕನುಸಾರವಾಗಿ ಈಗ ಏಕಕಾಲದಲ್ಲಿ ಮೂರು

ಸೇವೆಗಳನ್ನು ಒಟ್ಟಿಗೆ ಮಾಡಬೇಕಾಗಿದೆ. ಒಂದನೆಯದು ವಾಣಿ. ಎರಡನೆಯದು ಸ್ವ ಶಕ್ತಿಶಾಲಿ ಸ್ಥಿತಿ ಹಾಗೂ ಮೂರನೆಯದು ಶ್ರೇಷ್ಠ ಆತ್ಮೀಯ ತರಂಗಗಳು. ಎಲ್ಲಿಯೇ ಸೇವೆಯನ್ನು ಮಾಡಿ ಅಲ್ಲಿ ಆ ರೀತಿ ಆತ್ಮೀಯ ತರಂಗಗಳನ್ನು ಹರಡಿ. ಆ ತರಂಗಗಳ ಪ್ರಭಾವದಲ್ಲಿ ಸಹಜವಾಗಿ ಆಕರ್ಷಿತರಾಗುತ್ತಿರಬೇಕು. ನೋಡಿ, ಈಗ ಅಂತಿಮ ಜನ್ಮದಲ್ಲಿಯೂ ತಮ್ಮೆಲ್ಲರ ಜಡಚಿತ್ರಗಳು ಹೇಗೆ ಸೇವೆಯನ್ನು ಮಾಡುತ್ತಿವೆ? ವಾಣಿಯಿಂದ ಮಾತನಾಡುತ್ತಿವೆಯೇ? ತರಂಗಗಳು ಯಾವ ರೀತಿ ಇರುತ್ತವೆ ಎಂದರೆ ಭಕ್ತರ ಭಾವನೆಗೆ ಸಹಜವಾಗಿ ಫಲವು ಲಭಿಸುತ್ತದೆ ಆ ವಿಧವಾಗಿ ತರಂಗಗಳು ಶಕ್ತಿಶಾಲಿಯಾಗಿ ಇರಬೇಕು ತರಂಗಗಳಲ್ಲಿ ಸರ್ವಶಕ್ತಿಗಳ ಕಿರಣಗಳು ಹರಡುತ್ತಾ ಇರಬೇಕು, ವಾಯುಮಂಡಲವೂ ಬದಲಾಗಬೇಕು. ತರಂಗಗಳ ಮೂಲಕ ಮನಸ್ಸಿನ ಮೇಲೆ ಮುದ್ರೆಯು ಬೀಳುತ್ತದೆ. ನಿಮ್ಮೆಲ್ಲರಿಗೂ ಅನುಭವವು ಇದೆಯಲ್ಲವೇ ಯಾವ ಆತ್ಮನ ಪ್ರತಿಯಾದರು ನಿಮ್ಮ ಮನಸ್ಸಿನಲ್ಲಿ ಒಂದುವೇಳೆ ಯಾವುದೇ ಒಳ್ಳೆಯ ಅಥವಾ ಕೆಟ್ಟ ತರಂಗಗಳು ತಮ್ಮ ಮನಸ್ಸಿನಲ್ಲಿ ಕುಳಿತುಕೊಂಡರೆ ಅದು ಎಷ್ಟು ಸಮಯ ನಡೆಯುತ್ತದೆ? ಬಹಳ ಸಮಯ ನಡೆಯುತ್ತದೆಯಲ್ಲವೇ? ಹೊರ ತೆಗೆಯಲು ಇಷ್ಟ ಪಟ್ಟರೂ ಹೊರಹೋಗುವುದಿಲ್ಲ. ಯಾರದಾದರೂ ಕೆಟ್ಟ ತರಂಗಗಳು ಕುಳಿತುಕೊಂಡರೆ ಆಗ ಅದು ಸಹಜವಾಗಿ ಹೋಗುತ್ತದೆಯೇ, ಅಂದಮೇಲೆ ತಮ್ಮ ಸರ್ವ ಶಕ್ತಿಗಳ ಕಿರಣಗಳ ಪ್ರಕಂಪನಗಳು, ಮುದ್ರೆಯ ಕೆಲಸ ಮಾಡುತ್ತದೆ. ವಾಣಿಯನ್ನು ಮರೆಯಬಹುದು ಆದರೆ ತರಂಗಗಳ ಪ್ರಭಾವದ ಮುದ್ರೆಯು ಸಹಜವಾಗಿ ಹೋಗುವುದಿಲ್ಲ. ಅನುಭವವಿದೆಯಲ್ಲವೇ! ಅನುಭವ ಇದೆಯಲ್ಲವೇ?

ಈ ಗುಜರಾತಿನವರು, ಬಾಂಬೆಯವರು ತೋರಿಸಿರುವ ಉತ್ಸಾಹ ಉಲ್ಲಾಸಕ್ಕಾಗಿ ಸಹ ಬಾಪ್‍ದಾದಾ ಪದಮಾ-ಪದಮಾಗುಣ ಶುಭಾಶಯಗಳನ್ನು ನೀಡುತ್ತಾರೆ. ಏಕೆ? ವಿಶೇಷತೆ ಏನಿತ್ತು? ಏಕೆ ಶುಭಾಶಯಗಳನ್ನು ಕೊಡುತ್ತಾರೆ. ದೊಡ್ಡ-ದೊಡ್ಡ ಸಮಾರಂಭಗಳನ್ನು ಮಾಡುತ್ತಿರುತ್ತೀರಿ ಆದರೆ ಮುಖ್ಯವಾಗಿ ಶುಭಾಶಯಗಳನ್ನು ಏಕೆ ಕೊಡುತ್ತಾರೆ? ಎರಡೂ ಕಡೆ ವಿಶೇಷತೆ ಇತ್ತು - ಏಕತೆ ಹಾಗೂ ದೃಢತೆ. ಎಲ್ಲಿ ಏಕತೆ ಹಾಗೂ ದೃಢತೆ ಇದೆಯೋ ಅಲ್ಲಿ ಒಂದು ವರ್ಷಕ್ಕೆ ಬದಲಾಗಿ ಒಂದು ತಿಂಗಳು ಒಂದು ವರ್ಷಕ್ಕೆ ಸಮಾನವಾಗಿದೆ. ಕೇಳಿದಿರಾ! ಗುಜರಾತ್ ಮತ್ತು ಬಾಂಬೆಯವರು, ಒಳ್ಳೆಯದು. ಗುಜರಾತ್ ನವರು ಬಹಳಷ್ಟು ಜನರಿದ್ದಾರೆ. ಸೇವೆಯ ಅವಕಾಶ ಗುಜರಾತಿನವರದು. ಗುಜರಾತಿನವರು 4500 ಜನರಿದ್ದಾರೆ ಎಲ್ಲರಿಗೂ ಶುಭಾಶಯಗಳು. ಕೇವಲ ಟೀಚರ್ಸ್ ಗೆ ಅಲ್ಲ ಮೊದಲು ನಿಮ್ಮೆಲ್ಲರಿಗೆ, ಒಂದು ವೇಳೆ ನಿಮ್ಮ ಸಹಯೋಗ ಇಲ್ಲದಿದ್ದರೆ ಟೀಚರ್ಸ್ ಏನು ಮಾಡುತ್ತಾರೆ. ಆದ್ದರಿಂದ ಗುಜರಾತ್ನ ಮಕ್ಕಳೆಲ್ಲರಿಗೂ ಈಗ ಸುವರ್ಣ ಅವಕಾಶದ ಶುಭಾಶಯಗಳು ಮತ್ತು ಸೇವೆಗಾಗಿಯೂ ಶುಭಾಶಯಗಳು. ಅದೇ ರೀತಿ ಸದಾ ಸ್ವ ಉನ್ನತಿಯಲ್ಲಿ, ಸೇವೆಯ ಉನ್ನತಿಯಲ್ಲಿ ಒಬ್ಬರು ಒಂದು ಮಾಡಿದರೆ, ಹೇಳಿದರೆ, ಇನ್ನೊಬ್ಬರು ಹಾಗೆಯೇ ಎಂದು ಸದಾ ಏಕತೆ ಮತ್ತು ದೃಢತೆಯಿಂದ ಮುಂದಕ್ಕೆ ಹೋಗುತ್ತಾ ಇರಬೇಕು. ಶುಭಾಶಯಗಳು, ಒಳ್ಳೆಯದು. ಬಾಂಬೈನವರು ಎದ್ದು ನಿಲ್ಲಿರಿ(ಬಾಂಬೆಯಲ್ಲಿ ಇರುವ ಶಿವಾಜಿ ಪಾರ್ಕ್ ನಲ್ಲಿ 75ರಿಂದ 80 ಸಾವಿರ ಜನರ ಸಂಘಟನೆ ಆಗಿದೆ) ಒಳ್ಳೆಯದು. ಶುಭಾಶಯಗಳು ಲಭಿಸಿವೆಯಲ್ಲವೇ! ಬಾಪ್‍ದಾದಾ ಇಬ್ಬರಿಗೂ ಬಹಳಷ್ಟು ಶುಭಾಶಯಗಳನ್ನು ಕೊಡುತ್ತಿದ್ದಾರೆ. ಮಹಾರಾಷ್ಟ್ರ, ಬಾಂಬೆ, ಆಂಧ್ರಪ್ರದೇಶ್ ಎಲ್ಲರಿಗೂ ಶುಭಾಶಯಗಳು. ಬ್ರಾಹ್ಮಣ ಪರಿವಾರದವರೆಲ್ಲರ ಕಡೆಯಿಂದ ಮತ್ತು ಬಾಪ್‍ದಾದಾರವರ ಕಡೆಯಿಂದ ಗುಜರಾತ್ ಮತ್ತು ಮಹಾರಾಷ್ಟ್ರದವರಿಗೆ ಮನಸ್ಸಿನ ಬಹಳ ಬಹಳ ಆಶೀರ್ವಾದಗಳು, ಮನಸ್ಸಿನ ಈ ಆಶೀರ್ವಾದಗಳು ಸದಾ ನಿಮ್ಮ ಮನಸ್ಸಿನಲ್ಲಿ ಉತ್ಸಾಹ ಉಲ್ಲಾಸಗಳನ್ನು ಹೆಚ್ಚಿಸಬೇಕು. ಪಾಂಡವರು

ಸರಿಯೇ? ಎಲ್ಲರೂ ಬಹಳ ಒಳ್ಳೆಯ ಸೇವೆಯನ್ನು ಮಾಡಿದ್ದೀರಿ. ಎಲ್ಲರ ಸಹಯೋಗದಿಂದ ಲಕ್ಷಗಳ ಜನರ ಕಾರ್ಯಕ್ರಮವು ಸಫಲವಾಯಿತು. ಒಳ್ಳೆಯದು.

ವ್ಯಾಪಾರ, ಪರಿಶ್ರಮದ ವರ್ಗದವರೊಂದಿಗೆ:- ಬಾಪ್‌ದಾದಾ ವ್ಯಾಪಾರ ವರ್ಗದವರಿಗೆ ವಿಶೇಷ ಸಂಕಲ್ಪವನ್ನು ಕೊಡುತ್ತಿದ್ದಾರೆ. ಏಕೆಂದರೆ ವ್ಯಾಪಾರಸ್ಥರ ಹತ್ತಿರ ಬಹಳಷ್ಟು ಜನರು ಬರುತ್ತಾ ಇರುತ್ತಾರೆ. ಅವರು ಹೋಗುವ ಅವಶ್ಯಕತೆ ಇರುವುದಿಲ್ಲ. ಅವರ ಹತ್ತಿರವೇ ಬಂದು ವಸ್ತುಗಳನ್ನು ತೆಗೆದುಕೊಂಡು ಹೋಗುತ್ತಾರೆ. ಹಾಗಾದರೆ ಯಾರಾದರೆ ನಿಮ್ಮ ಹತ್ತಿರಕ್ಕೆ ಬರುತ್ತಿದ್ದಾರೆಯೋ ಅವರಿಗೆ ಕಡಿಮೆಯಲ್ಲಿ ಕಡಿಮೆ ತಂದೆಯ ಸಂದೇಶವನ್ನು ಕೊಡುತ್ತಿದ್ದೀರಾ? ಪ್ರತಿಯೊಬ್ಬ ವ್ಯಾಪಾರಸ್ಥರು ಅಥವಾ ಪರಿಶ್ರಮದಲ್ಲಿ ಇರುವವರು ತಮ್ಮ ಕಾರ್ಡುಗಳನ್ನು ತಯಾರು ಮಾಡಿಸುವವರು ಅದರಲ್ಲಿ ಜ್ಞಾನದ ಚಿಕ್ಕ ಚಿಕ್ಕ ಸ್ಲೋಗನ್ಸ್ ಇರಬೇಕು. ವಿಳಾಸವಿರಬೇಕು ಮತ್ತು ಎರಡು ಮಾತಿನಲ್ಲಿ ತಂದೆಯ ಸಂದೇಶವಿರಬೇಕು. ಹೀಗೆ ಎಲ್ಲರೂ ತಮ್ಮ ತಮ್ಮ ಕಾರ್ಡುಗಳನ್ನು ತಯಾರು ಮಾಡಿಸಿದ್ದೀರಾ? ಯಾರು ತಯಾರು ಮಾಡಿಸಿಕೊಂಡಿದ್ದೀರೋ ಅವರು ಕೈಯನ್ನು ಎತ್ತಿರಿ, ಇಷ್ಟು ಜನ ತಯಾರು ಮಾಡಿಸಿಕೊಳ್ಳಲಿಲ್ಲ. ವ್ಯಾಪಾರಸ್ಥರು ಮನೆಯಲ್ಲಿರುತ್ತಲೇ ಸೇವೆಯನ್ನು ಮಾಡಬಲ್ಲರು ಮತ್ತು ನಿಮ್ಮ ಹತ್ತಿರ ಬರುವ ಗ್ರಾಹಕರು ನಮಗೆ ಸಂದೇಶವನ್ನು ಕೂಡ ಕೊಡಲಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ ಕಾರ್ಡುಗಳು ತಪ್ಪದೇ ಮುದ್ರಿಸಿಕೊಳ್ಳಿರಿ. ಅವರು ಅವುಗಳನ್ನು ಕಸದ ಪುಟ್ಟಿಯಲ್ಲಿ ಹಾಕಬಾರದು ಅಷ್ಟು ಸುಂದರವಾಗಿ ಕಾರ್ಡುಗಳನ್ನು ತಯಾರುಮಾಡಿಸಬೇಕು. ವ್ಯಾಪಾರಸ್ಥರಿಗೆ ವ್ಯಾಪಾರ ಮಾಡಲು ಬಹಳ ಚೆನ್ನಾಗಿ ಬರುತ್ತದೆಯಲ್ಲವೇ? ಒಳ್ಳೆಯ ವ್ಯಾಪಾರಸ್ಥನು ಯಾರು ಎಂದರೆ, ಬಂದಿರುವವರು ಯಾರಾದರೂ ವ್ಯಾಪಾರ ಮಾಡದೇ ಹೋಗಬಾರದು. ಹಾಗಾದರೆ ನೀವು ಭಗವಂತನೊಂದಿಗೆ ವ್ಯಾಪಾರವನ್ನು ಮಾಡಿಸದೆ ಕೇವಲ ವಸ್ತ್ರಗಳ ಅಥವಾ ವಸ್ತುಗಳ ವ್ಯಾಪಾರವನ್ನು ಮಾಡಿಸುತ್ತಿದ್ದೀರಾ? ವ್ಯಾಪಾರಸ್ಥರು ಬಹಳ ಜನ ಆತ್ಮರನ್ನು ಸಹಯೋಗಿಗಳನ್ನಾಗಿ ಮಾಡಬಹುದು. ಸಹಯೋಗಿಯಿಂದ ನಿಧಾನವಾಗಿ ಯೋಗಿಯಾಗಿ ಬಿಡುತ್ತಾರೆ. ಆದ್ದರಿಂದ ಈ ವರ್ಷ ಎಲ್ಲರನ್ನೂ ಸಹಯೋಗಿಯ ಲಿಸ್ಟಿನಲ್ಲಿ ತರಬೇಕು. ಪ್ರತಿಯೊಬ್ಬ ವ್ಯಾಪಾರಸ್ಥನೂ ಎಷ್ಟು ಜನ ಆತ್ಮರಿಗೆ ಸಂದೇಶವನ್ನು ಕೊಟ್ಟಿದ್ದಾರೆ. ಎಷ್ಟು ಜನರನ್ನು ಸಹ ಯೋಗಿಯನ್ನಾಗಿ ತಯಾರು ಮಾಡಿದ್ದಾರೆ ಎಂಬುದನ್ನು ಬಾಪ್‌ದಾದಾ ನೋಡುತ್ತಾರೆ. ಸರಿಯೇ? ಮಾಡುತ್ತೀರಾ? ಸಂಖ್ಯೆಯನ್ನು ಹೆಚ್ಚಿಸಿರಿ ಎಂದು ದಾದಿ ಹೇಳುತ್ತಿದ್ದಾರೆ ಅಲ್ಲವೇ. ಆದ್ದರಿಂದ ಪ್ರತಿಯೊಬ್ಬ ವ್ಯಾಪಾರಸ್ಥನೂ ಸಂಖ್ಯೆಯನ್ನು ಹೆಚ್ಚಿಸಬಲ್ಲರು. ಸರಿಯೇ ಈಗ ಬಾಪ್‌ದಾದಾ ಸಹ ಫಲಿತಾಂಶವನ್ನು ನೋಡುತ್ತಾರೆ. ಬಾಪ್‌ದಾದಾರವರಿಗೆ ಏನು ತಿಳಿಯುತ್ತದೆ ಎಂದು ಕೊಳ್ಳಬೇಡಿರಿ. ಬಾಪ್‌ದಾದಾ ನೋಡುತ್ತಾರೆ. ವತನದಿಂದಲೂ ನೋಡಬಲ್ಲರು. ನಿಮ್ಮನ್ನು ಕೇಳಬೇಕಾಗಿರುವ ಅವಶ್ಯಕತೆ ಇರುವುದಿಲ್ಲ. ಹಾಗಾದರೆ ವ್ಯಾಪಾರಸ್ಥರು ಅದ್ಭುತವನ್ನು ಮಾಡುತ್ತೀರಲ್ಲವೇ? ಒಳ್ಳೆಯದು ಯಾರಾದರೆ ಒಳ್ಳೆಯ ಕೆಲಸವನ್ನು ಮಾಡಿದ್ದೀರೋ ಅವರ ಬಾಯಲ್ಲಿ ಗುಲಾಬ್ ಜಾಮೂನ್ ಎಂದು ಹೇಳುತ್ತಾರಲ್ಲವೇ! ಹಾಗೆಯೇ ಬಾಪ್‌ದಾದಾ ಸಹ ಹೇಳುತ್ತಿದ್ದಾರೆ ವ್ಯಾಪಾರ ಮಾಡುವವರ ಬಾಯಲ್ಲಿ ಗುಲಾಬ್ ಜಾಮ್. ಬಾಯಿಯಲ್ಲಿ ಇದೆಯೇ? ಒಳ್ಳೆಯದು. ಕುಳಿತುಕೊಳ್ಳಿ.

ಈಗ ಸೆಕೆಂಡಿನಲ್ಲಿ ಜ್ಞಾನಸೂರ್ಯನ ಸ್ಥಿತಿಯಲ್ಲಿ ನಾಲ್ಕೂ ಕಡೆಯ ಭಯಭೀತ, ಏರುಪೇರಿನ ಆತ್ಮರಿಗೆ ಸರ್ವಶಕ್ತಿಗಳ ಕಿರಣಗಳನ್ನು ಹರಡಿ. ಬಹಳ ಭಯಭೀತರಾಗಿದ್ದಾರೆ. ಶಕ್ತಿಯನ್ನು ಕೊಡಿ ತರಂಗಗಳನ್ನು ಹರಡಿ. ಒಳ್ಳೆಯದು

ಎಲ್ಲಾ ಕಡೆಯ ಮಕ್ಕಳ ಭಿನ್ನ-ಭಿನ್ನ ಸವಿ ನೆನಪು ಹಾಗೂ ಸಮಚಾರ ಪತ್ರಗಳು ಹಾಗೂ ಈ-ಮೇಲ್ ತಂದೆಯ ಬಳಿ ತಲುಪಿದೆ. ಪ್ರತಿಯೊಬ್ಬರು ಹೇಳುತ್ತಾರೆ ನನ್ನದೂ ನೆನಪು ಕೊಡಿ. ಬಾಪ್‌ದಾದಾ ಹೇಳುತ್ತಾರೆ. ಪ್ರತಿಯೊಂದು ಪ್ರಿಯ ಮಕ್ಕಳ ನೆನಪು ಬಾಪ್‌ದಾದಾರವರ ಬಳಿ ತಲುಪಿದೆ. ದೂರ ಕುಳಿತಿದ್ದರೂ ಸಹ ಬಾಪ್‌ದಾದಾರವರ ಹೃದಯ ಸಿಂಹಸನಾಧಾರಿಗಳು. ಅಂದಮೇಲೆ ತಾವೆಲ್ಲರಿಗೂ ಯಾರೆಲ್ಲಾ ಹೇಳಿದ್ದೀರಿ - ನೆನಪು ಕೊಡಬೇಕು. ನೆನಪು ಕೊಡಬೇಕು ಎಂದು ಅದು ತಂದೆಯ ಬಳಿ ತಲುಪಿದೆ. ಇದೇ ಮಕ್ಕಳ ಪ್ರೀತಿ ಹಾಗೂ ತಂದೆಯ ಪ್ರೀತಿ ಮಕ್ಕಳನ್ನು ಹಾರಿಸುತ್ತಿದೆ. ಒಳ್ಳೆಯದು.

**ನಾಲ್ಕೂ ಕಡೆಯ ಅತೀ ಶ್ರೇಷ್ಠ ಭಾಗ್ಯವಂತ, ಕೋಟಿಯಲ್ಲಿ ಕೆಲವರು ವಿಶೇಷ ಆತ್ಮರಿಗೆ, ಸದಾ ಸ್ವಮಾನದಲ್ಲಿ ಇರುವಂತಹ, ಸನ್ಮಾನ ನೀಡುವಂತಹ, ಸೇವಾಧಾರಿ ಮಕ್ಕಳಿಗೆ ಸದಾ ಸ್ಮೃತಿ ಸ್ವರೂಪರಿಂದ ಸಮರ್ಥ ಸ್ವರೂಪ ಅತ್ಮರಿಗೆ, ಸದಾ ಅಚಲ-ಅಡೋಲ ಸ್ಥಿತಿಯ ಆಸನದಲ್ಲಿ ಸ್ಥಿತರಾಗಿರುವ ಸರ್ವ ಶಕ್ತಿ ಸ್ವರೂಪ ಮಕ್ಕಳಿಗೆ, ಬಾಪ್‌ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.**

ದಾದಿಯವರ ಜೊತೆ: ಬಾಪ್‌ದಾದಾರವರಿಗೆ ತಮ್ಮ ಮೇಲೆ ವಿಶೇಷ ಖುಷಿಯಿದೆ. ಏಕೆ ಖುಷಿ ಇದೆ? ಹೇಗೆ. ಬ್ರಹ್ಮಾ ತಂದೆ ಎಲ್ಲರಿಗೂ ಅಜ್ಞೆ ಮಾಡುತ್ತಿದ್ದರು ಇದು ಮಾಡಬೇಕು. ಈಗ ಮಾಡಬೇಕು ಎಂದು ಅದೇ ರೀತಿ ತಾವೂ ಸಹ ತಂದೆಯನ್ನು ಅನುಸರಣೆ ಮಾಡಿದ್ದೀರಿ. ಈ ಕಾರಣದಿಂದ ವಿಶೇಷ ಖುಷಿ ಇದೆ (ತಾವೂ ನಮ್ಮ ಜೊತೆಯಲ್ಲಿ ಇದ್ದೀರಿ) ಅವರಂತೂ ಇದ್ದಾರೆ ತಾವು ನಿಮಿತ್ತರಾಗಿದ್ದೀರಲ್ಲವೇ. ಹಾಗೂ ಆ ರೀತಿ ದೃಢ ಸಂಕಲ್ಪವನ್ನು ಮಾಡಿದ್ದೀರಿ. ಆದ್ದರಿಂದ ಎಲ್ಲಾ ಕಡೆಯೂ ಸಫಲತೆ ಇದೆ. ಆದ್ದರಿಂದ ತಮ್ಮಲ್ಲಿ ಆತ್ಮಿಕ ಶಕ್ತಿ ಬಹಳ ಗುಪ್ತವಾಗಿ ತುಂಬಿದೆ. ಆರೋಗ್ಯ ಚೆನ್ನಾಗಿದೆ. ಆತ್ಮಿಕ ಶಕ್ತಿ ಅಷ್ಟೊಂದು ತುಂಬಿದೆ ಅದರ ಮುಂದೆ ಆರೋಗ್ಯ ಏನೇನೂ ಇಲ್ಲ. ಚಮತ್ಕಾರವಲ್ಲವೇ

ದಾದಿಯರ ಮಿಲನವನ್ನು ನೋಡಿ ಎಲ್ಲರಿಗೂ ಮನಸಾಗುತ್ತದೆ - ನಾವೂ ಸಹ ದಾದಿ ಆಗಿದ್ದರೆ ಮಿಲನ ಮಾಡುತ್ತಿದ್ದೆವು. ತಾವೂ ಸಹ ದಾದಿ ಆಗುತ್ತೀರಿ. ಈಗ ಬಾಪ್‌ದಾದಾರವರು ಮನಸ್ಸಿನಲ್ಲಿ ಯೋಜನೆಯನ್ನು ಮಾಡಿದ್ದಾರೆ. ಈಗ ಇನ್ನೂ ಕೊಟ್ಟಿಲ್ಲ. ಅಂದಮೇಲೆ ಯಾವ ಸೇವೆಯ, ಬ್ರಹ್ಮಾ ಬಾಬಾನ ಸಾಕಾರ ಸಮಯದಲ್ಲಿ ಸೇವೆಯಲ್ಲಿ ಅದಿರತ್ನಗಳು ಬಂದರೋ, ಅವರ ಸಂಘಟನೆಯನ್ನು ಪಕ್ಕಾ ಮಾಡಬೇಕು. (ಯಾವಾಗ ಮಾಡುತ್ತೀರಿ?) ತಾವು ಮಾಡಿದಾಗ. ಈ ಕರ್ತವ್ಯ ತಮ್ಮದಾಗಿದೆ (ಜಾನಕಿ ದಾದಿಯವರು). ತಮ್ಮ ಮನಸ್ಸಿನ ಸಂಕಲ್ಪವೂ ಇದೇ ತಾನೇ? ಏಕೆಂದರೆ ತಾವು ದಾದಿಯವರ ಏಕತೆ ಹಾಗೂ ದೃಢತೆ ಹಾಗೂ ಸಂಘಟನೆ ಪರಿಪಕ್ವವಾಗಿದೆ. ಹಾಗೆ ಆದಿಯ ಸೇವೆಯ ರತ್ನಗಳ ಸಂಘಟನೆ ಪರಿಪಕ್ವವಾಗಲಿ, ಇದಕ್ಕೆ ಇದರ ಅವಶ್ಯಕತೆ ಬಹಳ ಇದೆ ಏಕೆಂದರೆ ಸೇವೆಯಂತೂ ಹೆಚ್ಚಾಗಬೇಕು. ಅಂದಮೇಲೆ ಸಂಘಟನೆಯ ಶಕ್ತಿ ಏನನ್ನು ಬೇಕಾದರೂ ಮಾಡಬಹುದು. ಸಂಘಟನೆಯ ಚಿಹ್ನೆಯೇ ಪಂಚಪಾಂಡವರಾಗಿದ್ದಾರೆ. 5 ಜನ ಆದರೆ ಸಂಘಟನೆಯ ಗುರುತಾಗಿದೆ. ಒಳ್ಳೆಯದು - ಈಗ ಯಾರು ಸಾಕಾರ ಬ್ರಹ್ಮಾರವರ ಮಕ್ಕಳಾಗಿದ್ದು ಸೇವೆಯ ಸೇವಾಕೇಂದ್ರದಲ್ಲಿ ಇದ್ದಾರೆಯೋ ಅವರು ನಿಂತುಕೊಳ್ಳಿ. ಸೇವಾಕೇಂದ್ರದಲ್ಲಿ ಇರುವವರು. ಸಹೋದರರೂ ಇದ್ದಾರೆ. ಪಾಂಡವರಿಲ್ಲದೇ ಗತಿ ಇದೆಯೇನು, ಇಲ್ಲ ಕಡಿಮೆ ಇದ್ದಾರೆ ಆದರೆ ಇನ್ನೂ

ಅನೇಕರಿದ್ದಾರೆ. ಸಂಘಟನೆಯನ್ನು ಜಮಾ ಮಾಡುವ ಜವಾಬ್ದಾರಿ ಇವರದ್ದಾಗಿದೆ (ಜಾನಕಿ ದಾದಿ). ಇವರಂತೂ (ದಾದಿಯವರು) ಬೆನ್ನೆಲುಬು (ಆಧಾರ) ಆಗಿದ್ದಾರೆ. ಬಹಳ ಒಳ್ಳೊಳ್ಳೆಯ ರತ್ನಗಳು ಇದ್ದಾರೆ. ಒಳ್ಳೆಯದು ಎಲ್ಲರೂ ಚೆನ್ನಾಗಿದ್ದೀರಾ? ಏನೇ ಮಾಡುತ್ತಿದ್ದರೂ ತಮ್ಮ ಸಂಘಟನೆಯ ಮಹಾನತೆಯಿದೆ. ಕೋಟೆ ಶಕ್ತಿಶಾಲಿಯಾಗಿದೆ.

ರಿವೈಸ್ ಕೋರ್ಸ್ 17-03-2003.

***ಈ ವರ್ಷ ಸ್ವಮಾನದಲ್ಲಿ ಇರಬೇಕು, ಸನ್ಮಾನವನ್ನು ಕೊಡಬೇಕು, ಸರ್ವರ ಸಹಯೋಗಿ ಆಗಬೇಕು ಹಾಗೂ ಸಮರ್ಥರನ್ನಾಗಿ ತಯಾರು ಮಾಡಬೇಕು.***

ಕೇವಲ ಕೆಲ ಆತ್ಮರ ಸೇವೆಯನ್ನು ಮಾಡುವುದಲ್ಲ ಆದರೆ ವಿಶ್ವದಲ್ಲಿರುವ ಸರ್ವಾತ್ಮರಿಗೆ ಮುಕ್ತಿದಾತರಾಗಲು ನೀವು ನಿಮಿತರಾಗಿದ್ದೀರಿ. ಏಕೆಂದರೆ ನೀವು ತಂದೆಯ ಸಹಯೋಗಿಗಳು ಆದ್ದರಿಂದ ಈಗ ಸಮಯ ಪ್ರಮಾಣವಾಗಿ ಒಂದೇ ಸಮಯದಲ್ಲಿ 3 ಸೇವೆಗಳನ್ನು ಮಾಡಿರಿ. ವಾಚಾದ ಮೂಲಕ, ಸ್ವಶಕ್ತಿ ಶಕ್ತಿಶಾಲಿ ಸ್ಥಿತಿಯ ಮೂಲಕ, ಶ್ರೇಷ್ಠ ಆತ್ಮಿಕ ತರಂಗಗಳ ಮೂಲಕ ಎಲ್ಲಿ ಸೇವೆಯನ್ನು ಮಾಡಿದರೂ ಅಲ್ಲಿ ಆತ್ಮಿಕ ತರಂಗಗಳನ್ನು ಪ್ರಸರಿಸಿರಿ. ಈ ತರಂಗಗಳ ಪ್ರಭಾವದಿಂದ ಇತರರು ಸಹಜವಾಗಿ ಆಕರ್ಷಿತರಾಗುತ್ತಾರೆ. ನಿಮ್ಮ ಸರ್ವಶಕ್ತಿಗಳ ಕಿರಣಗಳ ವೈಬ್ರೇಶನ್ ಮುದ್ರೆಯಂತೆ ಕೆಲಸ ಮಾಡುತ್ತದೆ. ಮಾತುಗಳನ್ನು ಮರೆತು ಹೋಗಬಹುದು ಆದರೆ ತರಂಗಗಳ ಮುದ್ರೆ ಸಹಜವಾಗಿ ತೊಲಗುವುದಿಲ್ಲ. ಎನ್ನುತ್ತಾ ಬಾಪ್‌ದಾದಾ ತನ್ನ ಸ್ಮೃತಿ ಸ್ವರೂಪ ಮಕ್ಕಳೊಂದಿಗೆ ಮಾತನಾಡುತ್ತಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಮರ್ಥ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಆನಂದ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಪರಮಾತ್ಮನ ಪಾಲನೆ, ಶಿಕ್ಷಣ, ಶ್ರೀಮತದ ಶ್ರೇಷ್ಠ ಭಾಗ್ಯದ ಸ್ಮೃತಿ ಸ್ವರೂಪವಾಗಿದ್ದೇನೆ.

2. ನಾನು ಸಂಗಮಯುಗದಲ್ಲಿ ಸದಾ ಸ್ಮೃತಿ ಸ್ವರೂಪವಾಗಿದ್ದು ಸರ್ವಪ್ರಾಪ್ತಿಗಳನ್ನು ಅನುಭವ ಮಾಡಿಕೊಳ್ಳುತ್ತಿದ್ದೇನೆ.

3. ನನಗೆ ಮರುಜೀವಾ ಜನ್ಮದಲ್ಲಿ ಆತ್ಮಭಿಮಾನಿ ಎಂದರೆ ದೇಹೀಅಭಿಮಾನಿ ಸ್ಥಿತಿಯು (ನಾನು ಆತ್ಮ ಎಂಬ ಮೊದಲ ಪಾಠ) ಸ್ವಾಭಾವಿಕ ಸಂಸ್ಕಾರವಾಗಿ ನಿರಂತರ ಮತ್ತು ಸಹಜ ಸ್ಮೃತಿ ಸ್ವರೂಪವಾಗಿದ್ದೇನೆ.

4. ನಾನು ಶ್ರಮದಿಂದ ಮುಕ್ತನಾಗಿ ಸಮಯವನ್ನು ಸಮೀಪವಾಗಿ ತರುವ ಮತ್ತು ವಿಶ್ವದಲ್ಲಿರುವ ಎಲ್ಲಾ ಆತ್ಮಿಕ ಸಹೋದರರನ್ನು ದುಃಖ, ಅಶಾಂತಿಯಿಂದ ಮುಕ್ತರನ್ನಾಗಿ ಮಾಡುವ ಸಮರ್ಥ ಸ್ವರೂಪ.

5. ನಾನು ತನುವಿನ, ಮನಸ್ಸಿನ,  ವ್ಯಕ್ತಿಯ ಅಥವಾ ಪ್ರಕೃತಿಯ ಮೂಲಕ ಸಮಸ್ಯೆ ಅಥವಾ ಹಿಮಾಲಯಗಿಂತಲೂ ದೊಡ್ಡ ಪರಿಸ್ಥಿತಿಯನ್ನಾದರೂ ನನ್ನ ಸ್ವಸ್ತಿತಿಯ ಮೂಲಕ ಸಮಸ್ಯೆಗಳನ್ನು ಸಮಾಪ್ತಿ ಮಾಡಿ ಸಮಾಧಾನ ಸಮರ್ಥ ಸ್ವರೂಪವಾಗಿದ್ದೇನೆ.

6. ನನಗೆ ಸ್ವಮಾನವು ಸ್ವಾಭಾವಿಕವಾಗಿ ಸ್ಮೃತಿಯಲ್ಲಿದೆ.

7. ನಾನು ಮಾತುಗಳನ್ನು ನೋಡದೇ ದಾತನಾಗಿ ಸನ್ಮಾನವನ್ನು ಕೊಟ್ಟು ಸಹಯೋಗಿ ಆಗಿದ್ದೇನೆ.

8. ನಾನು ಸ್ವಮಾನದಲ್ಲಿ ಇರುತ್ತಾ ಗೌರವವನ್ನು ಕೊಟ್ಟು ಬೀಳುವವರನ್ನು (ಬಲಹೀನ ಆತ್ಮರನ್ನು) ಬೀಳಿಸದೇ, ಆಲಿಂಗನ ಮಾಡಿಕೊಂಡು ಅರ್ಥಾತ್ ತಂದೆಯ ಸಮಾನವಾಗಿ ಸಮರ್ಥವಾಗಿ ತಯಾರು ಮಾಡಿದ್ದೇನೆ.

9. ನಾನು ಆಶೀರ್ವಾದಗಳನ್ನು ಕೊಟ್ಟು ಆಶೀರ್ವಾದಗಳನ್ನು ಪಡೆದಿದ್ದೇನೆ ಮತ್ತು ಗೌರವ(ಸನ್ಮಾನ)ವನ್ನು ಕೊಟ್ಟು ಮಹಿಮಾ ಯೋಗ್ಯವಾಗಿ ತಯಾರಾಗಿದ್ದೇನೆ.

10. ನಾನು ಎಲ್ಲಿ ಸೇವೆಯನ್ನು ಮಾಡಿದರೂ ಒಂದೇ ಸಮಯದಲ್ಲಿ ವಾಚಾದ ಮೂಲಕ, ಸ್ವ ಶಕ್ತಿಶಾಲಿ ಸ್ಥಿತಿಯ ಮೂಲಕ, ಶ್ರೇಷ್ಠ ಆತ್ಮಿಕ ತರಂಗಗಳ ಮೂಲಕ ಆತ್ಮಿಕ ತರಂಗಗಳನ್ನು, ಸರ್ವಶಕ್ತಿಗಳ ಕಿರಣಗಳನ್ನು ಹರಡಿದ್ದೇನೆ.

11. ನಾನು ಸ್ವಉನ್ನತಿಯಲ್ಲಿ, ಸೇವೆಯ  ಉನ್ನತಿಯಲ್ಲಿ ಒಬ್ಬರು ಒಂದು ಹೇಳಿದರೆ, ಇನ್ನೊಬ್ಬರು ಹಾಗೆಯೇ ಎಂದು ಏಕತೆ ಮತ್ತು ದೃಡತೆಯ ಮೂಲಕ ಮುಂದಕ್ಕೆ ಹೋಗುತ್ತಾ ಇದ್ದೇನೆ.

12. ನಾನು ವ್ಯಾಪಾರದಲ್ಲಿ ಅಥವಾ ಪರಿಶ್ರಮದಲ್ಲಿ ಯಾರಾದರೆ ನನ್ನ ಹತ್ತಿರಕ್ಕೆ ಬರುತ್ತಿದ್ದಾರೆಯೋ ಅವರಿಗೆ ಕಾರ್ಡುಗಳನ್ನು ಸುಂದರವಾಗಿ ತಯಾರು ಮಾಡಿಸಿ ಜ್ಞಾನದ ಚಿಕ್ಕ ಚಿಕ್ಕ ಸ್ಲೋಗನ್ಸ್, ವಿಳಾಸ ಮತ್ತು ಎರಡು ಮಾತುಗಳಲ್ಲಿ ತಂದೆಯ ಸಂದೇಶವನ್ನು ಕೊಡುವ ಸೇವೆಯನ್ನು ಮಾಡುತ್ತಿದ್ದೇನೆ.

13. ನಾನು ಒಂದು ಕ್ಷಣದಲ್ಲಿ ಜ್ಞಾನ ಸೂರ್ಯನ ಸ್ಥಿತಿಯಲ್ಲಿ ಸ್ಥಿತವಾಗಿ ನಾಲ್ಕೂ ಕಡೆ ಇರುವ ಭಯಭೀತ ಆತ್ಮರಿಗೆ, ಏರುಪೇರಾದ ಆತ್ಮರಿಗೆ ಸರ್ವ ಶಕ್ತಿಗಳ ಕಿರಣಗಳನ್ನು ವ್ಯಾಪಿಸಿದ್ದೇನೆ(ಹರಡಿದ್ದೇನೆ).